6.10 ಪಿ.ಎಂ

ಇದು ರಾಜ್ಯದ ಇತರ ಜಿಲ್ಲೆಗಳಲ್ಲಿ ಮತ್ತು ಇತರ ಭಾಗಗಳಲ್ಲಿ ನಡೆಯುತ್ತಿರುವ ಬಗ್ಗೆ ಮತ್ತು ಅದರ ಮೂಲ ಯಾವುದಿದೆ ಎಂಬುದನ್ನು ಕಂಡು ಹಿಡಿಯುವ ಉದ್ದೇಶದಿಂದಲೇ ಇದನ್ನು ಸಿ.ಓ.ಡಿ.ಗೆ ವಹಿಸಲಾಗಿದೆ. ಸಿ.ಓ.ಡಿ. ವರದಿ ಬಂದಾದ ಮೇಲೆ ಸಿ.ಬಿ.ಐ.ಗೆ ವಹಿಸುವ ಬಗ್ಗೆ ಯೋಚನೆ ಮಾಡೋಣ.

ಅಧ್ಯಕ್ಷರು : ಮಾನ್ಯ ಮಾದಪ್ಪನವರೇ, ಇನ್ನು ಇದರ ಮೇಲೆ ಮಾತನಾಡುವುದು ಬೇಡ. ದಯಮಾಡಿ ಸಹಕರಿಸಿ.

ಶ್ರೀ ಡಿ.ಎಸ್.ಮಾದಪ್ಪ : ಮಾನ್ಯ ಅಧ್ಯಕ್ಷರೇ, ಅಲ್ಲಿರುವ ಎಲ್ಲಾ ವಕೀಲರುಗಳೂ ಸಂಘದ ಸದಸ್ಯರಲ್ಲ. ಕೇವಲ 43 ಜನ ವಕೀಲರು ಮಾತ್ರ ಸೊಸೈಟಿ ಸದಸ್ಯರಾಗಿದ್ದಾರೆ. ಅದರಲ್ಲಿ 11 ಜನ ಡೈರೆಕ್ಟರ್ಸ್ ಇದ್ದಾರೆ. ಮಾನ್ಯ ನಾಣಯ್ಯನವರು ಹೇಳಿದಂತೆ 120 ಜನರೂ ಅದರ ಸದಸ್ಯರಲ್ಲ. ಇವತ್ತು ಅಲ್ಲಿಯ ವಕೀಲರ ಅಸೋಸಿಯೇಷನ್ ಆರೋಪಿಗಳನ್ನು ಡಿಬಾರ್ ಮಾಡಬೇಕೆಂದು ನಿರ್ಣಯ ಮಾಡಿದೆ. ಆರೋಪಿಗಳಾಗಿರುವ ಸಂಘದ ಪದಾಧಿಕಾರಿಗಳು ಯಾರಿದ್ದಾರೆ, ಅವರನ್ನು ಡಿಬಾರ್ ಮಾಡಲು ಸಂಘ ನಿರ್ಣಯ ತೆಗೆದುಕೊಂಡಿದೆ. ಎಲ್ಲಾ ವಕೀಲರೂ ಸಂಘದ ಸದಸ್ಯರಾಗಿಲ್ಲ.

ಅಧ್ಯಕ್ಷರು : ಅದು ಹಾಗಲ್ಲ, ಒಂದು ನಿಮಿಷ ಕುಳಿತುಕೊಳ್ಳಿ, ನಾನು ಹೇಳುತ್ತೇನೆ. ಎಲ್ಲೆಲ್ಲಿ ಕೋರ್ಟ್ ಇರುತ್ತದೆ, ಅಲ್ಲೆಲ್ಲಾ ಅಡ್ವೊಕೇಟ್ಸ್ ಅಸೋಸಿಯೇಷನ್‌ಗಳು ಇರುತ್ತವೆ. ಸಾಮಾನ್ಯವಾಗಿ ಅಲ್ಲಿ ಎಲ್ಲರೂ ಸೇರಿಕೊಂಡು ಒಂದು ಲೀಗಲ್ ಪ್ರಾಕ್ಟೀಷನರ್ಸ್ ಕೋ-ಆಪರೇಟಿವ್ ಸೊಸೈಟಿ ಅಂತ ಮಾಡಿಕೊಂಡಿರುತ್ತಾರೆ. ಎಲ್ಲಾ ಅಡ್ವೊಕೇಟ್ಸ್‌ಗಳೂ ಅಲ್ಲಿ ಎನ್‌ರೋಲ್‌ಮೆಂಟ್‌ಗೆ ಹೋದಾಗ ತಕ್ಷಣ ಆಟೋಮೆಟಿಕ್ಕಾಗಿ ಒಂದು ಫಾರಂ ತುಂಬಿಸಿಕೊಂಡು ಅವರನ್ನೆಲ್ಲಾ ಮೆಂಬರ್ ಮಾಡಿಕೊಳ್ಳುತ್ತಾರೆ. ಬೆಂಗಳೂರಿನಲ್ಲೂ ಕೂಡ ಅಂತಹ ಒಂದು ಸಂಘ ಇದೆ. ಎಲ್ಲರೂ ಸೊಸೈಟಿ ಮೆಂಬರ್ಸ್ ಆಗಿರಬೇಕು. ಇದರ ಬಗ್ಗೆ ನಿಮಗೇನೂ ಗೊತ್ತಾಗುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಬೃಹತ್ ಕೈಗಾರಿಕೆಗಳ ತ್ಯಾಜ್ಯ ವಸ್ತುಗಳು ಸಮುದ್ರಕ್ಕೆ ಸೇರುವುದರಿಂದ ಮೀನುಗಾರರಿಗೆ ತೊಂದರೆ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಬೃಹತ್ ಕೈಗಾರಿಕೆಗಳ ತ್ಯಾಜ್ಯ ವಸ್ತುಗಳು ಸಮುದ್ರಕ್ಕೆ ಸೇರುವುದರಿಂದ ಮೀನುಗಾರರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ನಾನು ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) : ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಬೃಹತ್ ಕೈಗಾರಿಕೆಗಳು ಸಮುದ್ರಕ್ಕೆ

ಬಿಡುತ್ತಿರುವ ತ್ಯಾಜ್ಯ ವಸ್ತುಗಳ ಬಗ್ಗೆ ಮಂಗಳೂರು ಮೀನುಗಾರಿಕೆ ಕಾಲೇಜಿನ ಮತ್ತು ಕೊಚ್ಚಿನ್‌ನಲ್ಲಿರುವ ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಮೆರೀನ್ ಫಿಶರೀಸ್ ರೀಸರ್ಚ್ ಇನ್ಸ್‌ಟಿಟ್ಯೂಟ್‌ನ ಸಂಶೋಧಕರು ಕಾಲಕಾಲಕ್ಕೆ ವೈಜ್ಞಾನಿಕ ಪರಿಶೀಲನೆಗಳನ್ನು ನಡೆಸಲಾಗುತ್ತಿದ್ದು, ಈ ಬೃಹತ್ ಕೈಗಾರಿಕೆಗಳು ಸಮುದ್ರಕ್ಕೆ ಬಿಡುತ್ತಿರುವ ತ್ಯಾಜ್ಯ ವಸ್ತುಗಳಿಂದ ಮೀನಿನ ಉತ್ಪಾದನೆಗೆ ವೈಜ್ಞಾನಿಕವಾಗಿ ತೊಂದರೆಯಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಈ ಸಾಲಿನಲ್ಲಿ ತಡವಾಗಿ ಮುಂಗಾರು ಪ್ರಾರಂಭವಾಗಿದ್ದು, ಹಾಗೂ ಪ್ರಕ್ಷುಬ್ದ ಸಮುದ್ರ ಪರಿಸ್ಥಿತಿಯಿಂದ ನಾಡದೋಣಿ ಮೀನುಗಾರಿಕೆಗೆ ಜೂನ್ 1997ರ ವರೆಗೆ ದಕ್ಷಿಣ ಭಾಗಗಳಲ್ಲಿ ಸ್ವಲ್ಪ ಕಡಿಮೆಯಾಗಿರುವುದು. ಇದಲ್ಲದೆ ರಾಜ್ಯದಲ್ಲಿ 1100 ಮೆಟ್ರಿಕ್ ಟನ್ ಮೀನು ಉತ್ಪಾದನೆ ಜೂನ್ 1997ರಲ್ಲಿ ಆಗಿರುವುದು. ಹಿಂದಿನ ಮೂರು ವರ್ಷಗಳ ಜೂನ್ ತಿಂಗಳ ಸರಾಸರಿ ಹಿಡುವಳಿ 1212 ಮೆ.ಟನ್ ಆಗಿರುತ್ತದೆ. ಮಳೆಗಾಲವು ಆಗಸ್ಟ್ 1997ರ ವರೆಗೂ ಇರುವುದರಿಂದ ನಾಡದೋಣಿ ಮೀನುಗಾರಿಕೆಯು ಸುಧಾರಿಸುವ ಸಾಧ್ಯತೆಗಳಿರುವುದು. ಆದುದರಿಂದ ನಾಡದೋಣಿ ಮೀನುಗಾರರಿಗೆ ಭವಣೆ ಉಂಟಾಗಿರುವುದೆಂದು ಈಗಲೇ ತೀರ್ಮಾನಿಸುವುದು ಸರಿ ಕಂಡು ಬರುವುದಿಲ್ಲ. ಆಗಸ್ಟ್ 1997ರ ವರೆಗೆ ಮೀನು ಹಿಡುವಳಿಯನ್ನು ಪರಿಶೀಲಿಸಿ ಈ ಸಾಲಿನಲ್ಲಿ ಒಟ್ಟು ಮೀನು ಹಿಡುವಳಿಯನ್ನು ಗಣನೆಗೆ ತೆಗೆದುಕೊಂಡು ನಾಡದೋಣಿ ಮೀನುಗಾರಿಕೆ ಸಾಧನೆಯನ್ನು ಪರಿಶೀಲಿಸಲಾಗುವುದು.

ದಕ್ಷಿಣ ಕರಾವಳಿಯಲ್ಲಿ ಸುಮಾರು 500 ಮಾಟು ಬಲೆ ಘಟಕಗಳಿದ್ದು, ಇದರಲ್ಲಿ ಸುಮಾರು 10,000 ಮೀನುಗಾರರು ದುಡಿಯುತ್ತಿದ್ದಾರೆ. ಮೀನುಗಾರಿಕೆ ಋತುವಿನಲ್ಲಿ ರಾಜ್ಯದ ಒಟ್ಟು ಹಿಡುವಳಿಯ ಪ್ರಮಾಣಕ್ಕೆ ಹೋಲಿಸಿದಲ್ಲಿ ಮಳೆಗಾಲದ ಹಿಡುವಳಿ ಕೇವಲ ಶೇ.4-5 ರಷ್ಟು ಆಗುತ್ತದೆ.

+ ಶ್ರೀ ಯು.ಆರ್. ಸಭಾಪತಿ : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಜೂನ್ ತಿಂಗಳ 5ನೇ ತಾರೀಖಿನಂದು ದಕ್ಷಿಣ ಕನ್ನಡ ಜಿಲ್ಲೆ ಕರಾವಳಿಯ ಸೋಮೇಶ್ವರದಿಂದ ಬೈಂದೂರಿನವರೆಗೆ ಸುಮಾರು 160 ಕಿ.ಮೀ. ಉದ್ದದ ಸಮುದ್ರ ಕಿನಾರೆಯಲ್ಲಿ ಸುಮಾರು 100 ಕಿ.ಮೀ. ಉದ್ದಕ್ಕೆ ಸುಮಾರು 6 ಇಂಚು ದಡದಲ್ಲಿ ಕಪ್ಪಗಿನ ಡಾಂಬರು ತರಹದ ಒಂದು ವಸ್ತು ಶೇಖರಣೆಯಾಗಿದ್ದು ಕಂಡು ಬಂದಿದೆ. ಇದರ ಬಗ್ಗೆ ಫಿಶರೀಸ್ ಕಾಲೇಜ್ ಹಾಗೂ ಸೆಂಟ್ರಲ್ ಮೆರಿನ್ ಫಿಶರೀಸ್ ರೀಸರ್ಚ್ ಇನ್ಸ್‌ಟಿಟ್ಯೂಟ್ ವರದಿಗಳನ್ನು ಕೊಟ್ಟಿವೆ. ಅದರಲ್ಲಿ ಹೈಡ್ರೋಕಾರ್ಬನ್, ಗ್ರೀಸ್ ಮತ್ತು ಆಯಿಲ್ ಇರುವುದರ ಬಗ್ಗೆ ಮೀನುಗಾರಿಕೆ ಕಾಲೇಜಿನ ವರದಿಯಲ್ಲಿ ಉಲ್ಲೇಖವಾಗಿದೆ. ಅಷ್ಟೇ ಅಲ್ಲದೆ ಪರಿಸರ ಇಲಾಖೆಯವರೂ ಕೂಡ ಈ ಬಗ್ಗೆ ತನಿಖೆ ಮಾಡಲಿಕ್ಕೆ ಬಂದರು. ಅವರು ತನಿಖೆ ಮಾಡಲಿಕ್ಕೆ ಬಂದು ಈ ತ್ಯಾಜ್ಯ ವಸ್ತುಗಳ ಪರಿಷ್ಕರಣೆ ಮಾಡಲಿಕ್ಕೆ ನಮ್ಮಲ್ಲಿ ಸಲಕರಣೆಗಳು ಇಲ್ಲವೆಂದು ಹೇಳಿ ಎಂ.ಆರ್.ಪಿ.ಎಲ್. ನವರಿಗೆ ವಹಿಸಿ ಕೊಟ್ಟರು. ಅದರಲ್ಲಿ ಪ್ಯಾರಾಸಿನ್‌ಇದೆ ಎಂದು ಅವರು ವರದಿ ಕೊಟ್ಟರು. ಆ ವರದಿಯಲ್ಲಿ ಅವರು ಪ್ರತಿ ಚದರು ಮೀಟರ್‌ಗೆ 16 ಗ್ರಾಂನಿಂದ 55 ಗ್ರಾಂನವರೆಗೆ ಈ ತ್ಯಾಜ್ಯ ವಸ್ತುವಿನಲ್ಲಿ ಹೈಡ್ರೋಕಾರ್ಬನ್ ಅಂಶ ಇದೆ ಎಂಬುದು ಬೆಳಕಿಗೆ ಬಂತು ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಇಷ್ಟೇ, ಒಂದು ಕಡೆ ಕಳೆದ ಎರಡು ವರ್ಷಗಳಿಂದ ಬಹಳಷ್ಟು ಬೃಹತ್ ಕೈಗಾರಿಕೆಗಳಿಂದ ತ್ಯಾಜ್ಯ ವಸ್ತುಗಳು

ಬಂದು ಮೀನುಗಾರಿಕೆ ಸ್ಥಗಿತವಾಗುತ್ತದೆ ಎಂಬ ಮುನ್ಸೂಚನೆಯನ್ನು ಈಗಾಗಲೇ ಈ ಸದನದಲ್ಲಿ ಕೊಟ್ಟಿದ್ದೆ. ಇವತ್ತು ನನ್ನ ಆ ಮಾತು ಸತ್ಯವಾಗುತ್ತಿದೆ. ಇವತ್ತು ಜೂನ್ 1ನೇ ತಾರೀಖಿನಿಂದ ಆಗಸ್ಟ್‌ನವರೆಗೆ ಮಳೆಗಾಲದಲ್ಲಿ 5 ಹೆಚ್.ಪಿ.ಗಿಂತ ಕಡಿಮೆ ಇರತಕ್ಕ ನಾಡ ದೋಣಿಗಳು ಮೀನುಗಾರಿಕೆಗೆ ಹೋಗುವಂತಹ ಒಂದು ಸಂಪ್ರದಾಯ ಇದೆ. ಈ ಸಂಪ್ರದಾಯದ ಪ್ರಕಾರ ಜೂನ್ 1 ರಿಂದ ಈವರೆಗೆ ನಾಡ ದೋಣಿ ಮೀನುಗಾರರು ಸುಮಾರು 12 ಸಾವಿರ ಜನರೇನು ಇದ್ದಾರೆ ಅವರಿಗೆ ಒಂದಷ್ಟೂ ಮೀನು ಉತ್ಪನ್ನ ಸಿಕ್ಕಲಿಲ್ಲ. ಒಂದಿಷ್ಟೂ ಮೀನು ಅವರಿಗೆ ಸಿಗದಿದ್ದರಿಂದ ಅವರ ಜೀವನೋಪಾಯಕ್ಕೆ ಮಾರ್ಗವಿಲ್ಲದೇ ಇವತ್ತು ಅವರು ಬೀದಿಪಾಲಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವತ್ತು ಏನಾಗಿದೆ ಅಂತ ಹೇಳಿದರೆ ಈಗಾಗಲೇ ಸಾಗರೋತ್ಪನ್ನ ಖರೀದಿ ಮಾಡುವಂತಹ ವಿದೇಶೀ ಸಂಸ್ಥೆಗಳೂ ಕೂಡ ಈ ರಫ್ತು ತಪಾಸಣಾ ಸಂಸ್ಥೆಯ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಸಾಗರೋತ್ಪನ್ನಗಳನ್ನು ಕೊಂಡುಕೊಳ್ಳಲಿಕ್ಕೆ ಕೂಡ ಅನೇಕ ಷರತ್ತುಗಳನ್ನು ಹಾಕಿ, ಹಿಂದೇಟು ಹಾಕಿದ್ದಾರೆ. ಇವತ್ತು ಇದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಭಟ್ಕಳದವರೆಗೆ ಸುಮಾರು 230 ಐಸ್‌ಪ್ಲಾನ್‌ಗಳಿದ್ದು, ಆವೆಲ್ಲಾ ಮುಚ್ಚಿ ಹೋಗಿವೆ. ಏಕೆಂದರೆ ಮೀನುಗಳೇ ಇಲ್ಲ. ಮೀನು ಶೇಖರಣೆ ಇಲ್ಲದೇ ಐಸ್‌ಪ್ಲಾನ್‌ಗಳ ಉಪಯೋಗ ಇಲ್ಲ. 12 ಸಾವಿರ ನಾಡದೋಣಿ ಮೀನುಗಾರರು ಇದ್ದು, ಇವತ್ತಿನವರೆಗೂ ಮೀನು ಸಿಗದಿರುವಂತಹ ಪರಿಸ್ಥಿತಿಯಲ್ಲಿ ಇದ್ದಾರೆ. ಅಷ್ಟೇ ಅಲ್ಲ, ಕರಾವಳಿಯ ಬದಿಯಲ್ಲಿ ಬರತಕ್ಕಂತಹ ಮೊಟ್ಟೆಗಳೂ ಕೂಡ ಈಗ ಅಲ್ಲಿ ಬರುತ್ತಿಲ್ಲ ಎನ್ನುವಂತಹ ಸೂಚನೆ ಕೂಡ ಬಂದಿದೆ. ಈ ಹಿನ್ನೆಲೆಯಲ್ಲಿ ಈ 12 ಸಾವಿರ ಬಡ ಮೀನುಗಾರರು ನಾಡದೋಣಿಗಳಿಗಾಗಿ ಮಾಡಿದಂತಹ ಸಾಲದ ಮೇಲಿನ ಬಡ್ಡಿ ಮನ್ನಾ ಮತ್ತು ಅದಕ್ಕೆ ಸಹಾಯ ಧನ ಕೊಡುವುದರ ಬಗ್ಗೆ ಸರ್ಕಾರ ಚಿಂತಿಸಬೇಕೆಂದು ಕೋರುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೂಡ ಈ ವಿಷಯಕ್ಕೆ ಸಂಬಂಧಪಟ್ಟಂತೆ ನಿಯೋಗವೊಂದನ್ನು ಒಂದು ವಾರದ ಹಿಂದೆ ನಾವು ತೆಗೆದುಕೊಂಡು ಹೋಗಿದ್ದೆವು. ಇನ್ನೇನು ಈ ವಾರದಲ್ಲಿ ಮೀನು ಸಿಗಬಹುದು ಎಂಬ ಆಶಾಭಾವನೆಯನ್ನೇನು ನಾವು ಇಟ್ಟುಕೊಂಡಿದ್ದೇವೋ ಅದೂ ಕೂಡ ಇವತ್ತಿನ ದಿವಸ ಈಡೇರದೇ, ಇವತ್ತಿನವರೆಗೂ ಯಾವುದೇ ರೀತಿಯ ಮೀನು ಸಿಕ್ಕದೇ ಎಲ್ಲರೂ ತಲ್ಲಣಗೊಂಡಿದ್ದಾರೆ. ತಾವು ದಯವಿಟ್ಟು ಅಂತಹ ಮೀನುಗಾರರಿಗೆ ಸಹಾಯ ಧನ ಕೊಡುವಂತಹ ಮತ್ತು ಮಾಡಿದಂತಹ ಸಾಲದ ಮೇಲಿನ ಬಡ್ಡಿಯನ್ನು ವಜಾ ಮಾಡುವಂತಹ ಅಥವಾ ನಿಬಡ್ಡಿ ತುರ್ತು ಸಾಲ ಅವರಿಗೆ ಕೊಟ್ಟು ಈ ಮೀನುಗಾರರು ಬದುಕುವ ಒಂದು ದಾರಿಯನ್ನು ತೋರಿಸಿ ಕೊಡಬೇಕೆಂದು ಕೋರುತ್ತೇನೆ. ಅದರೊಂದಿಗೆ ಬೃಹತ ಕೈಗಾರಿಕೆಗಳು ಸಮುದ್ರಕ್ಕೆ ಬಿಡುವಂತಹ ತ್ಯಾಜ್ಯ ವಸ್ತುಗಳ ಮೇಲೆ ಪರಿಸರ ಇಲಾಖೆಯಿಂದಲೂ ಕೂಡ ಒಂದು ಹದ್ದುಬಸ್ತನ್ನು, ನಿಯಂತ್ರಣವನ್ನು ನೀವು ಮಾಡದೇ ಹೋದರೆ, ಪ್ರಾಯಶಃ ಇವತ್ತೇನು ಜೂನ್‌ನಿಂದ ಆಗಸ್ಟ್‌ನವರೆಗೆ ಸಿಗತಕ್ಕಂತಹ ಅಂಕಿ ಅಂಶ ಏನಿದೆ, ಇದು ಮುಂದಿನ ವರ್ಷದ ಮೀನುಗಾರಿಕೆಗೆ ಒಂದು ದೊಡ್ಡ ಆಘಾತವನ್ನು ತೋರಿಸುತ್ತದೆ ಎನ್ನುವಂತಹ ಪರಿಸ್ಥಿತಿ ನಮಗೆ ಸಿಗಬಹುದು. ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ನಿವೇದಿಸಿಕೊಳ್ಳುತ್ತಿದ್ದೇನೆ,ದಯವಿಟ್ಟು ಆ12 ಸಾವಿರ ನಾಡ ದೋಣಿ ಮೀನುಗಾರರಿಗೆ ಕೊಡಬೇಕಾದಂತಹ

ಸಾಲದ ಮೇಲಿನ ಬಡ್ಡಿ ಮನ್ನಾ ಅಥವಾ ಅವರಿಗೆ ತುರ್ತು ಸಹಾಯ ಧನ, ನಿಬಡ್ಡಿ ಸಾಲ ಒದಗಿಸುವ ಬಗ್ಗೆ ಒಂದು ಮಾರ್ಗದರ್ಶನ ಕೊಡಬೇಕು. ಅದರ ಜೊತೆಗೆ ಇನ್ನು ಮುಂದೆ ಆ ಬಡ ಮೀನುಗಾರರು ಯಾವ ರೀತಿ ಬದುಕಬೇಕು, ಇದು ನನಗೆ ಗೊತ್ತಿಲ್ಲ. ಅವರ ಬವಣೆ ಏನೆಂದು ತಾವು ಈಗಾಗಲೇ ನೋಡಿದ್ದೀರಿ. ಮೊನ್ನೆ ನಿಮಗೆ ರೆಪ್ರೆಸೆಂಟೇಷನ್ ಕೊಡುವಾಗ ಇನ್ನೊಂದು ವಾದ ಇದೆ, ಇನ್ನೊಂದು ವಾರದಲ್ಲಿ ಪೂರ್ತಿಯಾಗಬಹುದು ಎಂದು ನಾನು ಎಣಿಸಿದ್ದೆ, ನಾವು ಆಗಸ್ಟ್ ಫಸ್ಟ್ ವೀಕ್‌ವರೆಗೆ ಕಾಯೋಣ ಎನ್ನುವಂತಹ ಮಾತನ್ನೂ ಕೂಡ ನಾನು ಹೇಳಿದ್ದೆ. ಇವತ್ತು ಆಗಸ್ಟ್ ಫಸ್ಟ್ ವೀಕ್‌ನಲ್ಲೂ ಕೂಡ ಮೀನು ಸಿಕ್ಕಿಲ್ಲ. ಮೀನು ಸಿಗುವುದಿರಲ್ಲಿ ಒಂದು ಬೋಟ್ ಕೂಡ ಮೀನುಗಾರಿಕೆಗೆ ಹೋಗಲಿಲ್ಲ. ಆದುದರಿಂದ ತಾವು ದಯವಿಟ್ಟು ಇದರ ಬಗ್ಗೆ ನಮಗೆ ಏನಾದರೂ ಆಶ್ವಾಸನೆ ಕೊಡಬೇಕು, ಮೀನುಗಾರರಿಗೆ ಒಂದು ಸವಲತ್ತು ಕೊಡುವುದರ ಬಗ್ಗೆ ತಮ್ಮ ಇಲಾಖೆ ಯಾವ ಕಾರ್ಯಕ್ರಮ ವಹಿಸಿಕೊಂಡಿದೆ ಎಂಬ ಮಾತನ್ನು ನಾನು ಕೇಳಬಯಸುತ್ತೇನೆ.

+ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಬೃಹತ್ ಕೈಗಾರಿಕೆಗಳಿಂದ ತ್ಯಾಜ್ಯ ವಸ್ತುಗಳನ್ನು ಸಮುದ್ರಕ್ಕೆ ಬಿಡುವುದರಿಂದ ಈ ಸಮಸ್ಯೆ ಉಂಟಾಗಿದೆ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಅದರ ಬಗ್ಗೆ ಒಂದು ಸರಿಯಾದ ಮಾಹಿತಿಯನ್ನು ಮೀನುಗಾರರಿಗೆ ತಲುಪಿಸುವ ಉದ್ದೇಶದಿಂದ ನಾನು ಒಂದೆರಡು ವಿಷಯಗಳನ್ನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ ಈ ಒಂದು ವಿಷಯ ಸರ್ಕಾರದ ಗಮನಕ್ಕೆ ಬಂದ ಕೂಡಲೇ ನಾವು ಯೂನಿವರ್ಸಿಟಿ ಆಫ್ ಅಗ್ರಿಕಲ್ಚರ್, ಫಿಶರೀಸ್ ಕಾಲೇಜಿನವರಿಗೆ ಇದರ ಬಗ್ಗೆ ದೂರವಾಣಿ ಮುಖಾಂತರ ತಿಳಿಸಿ, ತಕ್ಷಣ ಆ ಬಗ್ಗೆ ಅನಾಲಿಸಿಸ್ ಮಾಡಿ ರಿಪೋರ್ಟ್ ಅನ್ನು ಕಳುಹಿಸಿಕೊಡಬೇಕೆಂದು ಕೋರಿದ ಮೇರೆಗೆ ಅವರು ಸರ್ಕಾರಕ್ಕೆ ಒಂದು ರಿಪೋರ್ಟ್ ಕಳುಹಿಸಿದ್ದಾರೆ. ಅವರು ತಮ್ಮ ವರದಿಯಲ್ಲಿ ಏನು ಹೇಳುತ್ತಾರೆ ಎಂದರೆ, large scale arrival and accumulation of Tarballs long with beaches of Thannerbhavi, Panamboor and Suratkal was observed during August, 1993. ಇವತ್ತು ಮಾತ್ರ ಅಲ್ಲ, ಈವನ ಇನ್ 1993, ಅವತ್ತಿನ ದಿವಸ ಬೃಹತ್ ಕೈಗಾರಿಕೆಗಳು ಯಾವತ್ತೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರಲಿಲ್ಲ and was reported by the College of Fisheries that this incident was found to be due to the sinking of ship at the off-shore harbour and the Engine Oil and stored diesel Oil sleek was broken using detergent by the Port authorities. During the course of time, the bridge was cleaned by the district authorities. ಅವತ್ತೂ ಸಹ ಈ ಒಂದು ಪರಿಸ್ಥಿತಿ ಉಂಟಾಗಿತ್ತು. ಅದನ್ನೇ ಪುನಃ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಒಷಿಯೋಗ್ರಫಿನವರು ಏನು ಹೇಳುತ್ತಾರೆ ಎಂದರೆ, the Tharballs are the end products of the oil spills. They are also resulting from routine tank washing and dip barrel sleek. The occurence of the Tharballs on the beaches along the coasts of India is a seasonal phenomeno ಎಂದು ಹೇಳುತ್ತಾರೆ. They occur during April, May, September and October, during the south-west mansoon periodಅಂತ

ಹೇಳುತ್ತಾರೆ. ಅಲ್ಲಿ ಶಿಪ್ ತೊಳೆದಾಗ ಅದು ಸಮುದ್ರದಲ್ಲಿ ತೇಲಿಕೊಂಡು ಅದು ದಡಕ್ಕೆ ಬರುತ್ತದೆ ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಪುನಃ ನಾನು ಹೆಚ್ಚಿನ ಮಾಹಿತಿಗಾಗಿ ಪೊಲ್ಯೂಷನ್ ಕಂಟೋಲ್ ಬೋರ್ಡಿನವರಿಗೆ ತನಿಖೆ ನಡೆಸಿ ವರದಿಯನ್ನು ಒಪ್ಪಿಸಲಿಕ್ಕೆ ಹೇಳಿದ್ದೇನೆ. ಮತ್ತೆ ಮೀನುಗಾರಿಕೆಗೆ ಕ್ಷಾಮ ಬಂದಿದೆ ಅದಕ್ಕೆ ಪರಿಹಾರ ಕೊಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಸಮುದ್ರ ಸ್ವಲ್ಪ ರಫ್ ಇದ್ದಿದರಿಂದ ಮೀನುಗಾರಿಕೆಗೆ ಹೋಗುವುದಕ್ಕೆ ಆಗಲಿಲ್ಲ. ಆದರೆ 1996-97ನೇ ಸಾಲಿನಲ್ಲಿ 10651 ಮೀನುಗಾರರಿಗೆ ಸಾಧಾರಣ 24, 949 ರೂಪಾಯಿಗಳನ್ನು ಸಂಕಷ್ಟ ಪರಿಹಾರ ನಿಧಿಯಿಂದ ಈಗಾಗಲೇ ಪರಿಹಾರವನ್ನು ಕೊಟ್ಟಿದ್ದೇವೆ. ಮತ್ತೆ ಈ ಬಾರಿ ಕೂಡ ಈ ಒಂದು ಪರಿಹಾರವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಈ ಒಂದು ಮಳೆಗಾಲದ ಸಮಯದಲ್ಲಿ ಪ್ರತಿಯೊಬ್ಬ ಮೀನುಗಾರರಿಗೆ ತಿಂಗಳಿಗೆ 270 ರೂಪಾಯಿ ನಂತೆ ನಾಲ್ಕು ತಿಂಗಳ ಕಾಲ ಕೊಡುತ್ತೇವೆ ಮತ್ತೆ ಮಾನ್ಯ ಸದಸ್ಯರು ಮೀನುಗಾರರ ಮುಖಂಡರೊಂದಿಗೆ ನನ್ನ ಹಾಗೂ ಮುಖ್ಯಮಂತ್ರಿಗಳ ಕಚೇರಿಗೆ ಬಂದಾಗ ಅವರ ಸಾಲವನ್ನು ರೀ ಶೆಡ್ಯೂಲ್ ಮಾಡಿ ಇಂಟ್ರೆಸ್ಟ್ ಕನ್ಸೇಷನ್ ಕೊಡಿಸುವುದರ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾನು ಸಂಬಂಧಪಟ್ಟ ಬ್ಯಾಂಕುಗಳ ಮುಖ್ಯಸ್ಥರ ಜೊತೆಗೆ ಚರ್ಚೆಯನ್ನು ಮಾಡಿ ಪರಿಹಾರವನ್ನು ಕೊಡಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಯು.ಆರ್.ಸಭಾಪತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮೀನುಗಾರಿಕೆ ಸಚಿವರು 1993ನೇ ಸಾಲಿನಲ್ಲಿ ಶಿಪ ಮುಳುಗಡೆಯಾಗಿ ಅದರಿಂದ ಆಯಿಲ್ ಮತ್ತು ಗ್ರೀಸ್ ಬಂದಿದ್ದರ ಬಗ್ಗೆ ಇದ್ದಂಥ ವರದಿಯನ್ನು ತಿಳಿಸಿದ್ದಾರೆ. ಅದರ ಬಗ್ಗೆ ಕೋಸ್ಟಲ್ ಗಾರ್ಡ್‌ನವರು ಕೂಡ ಒಂದು ಎನ್‌ಕ್ವಾಯರಿಯನ್ನು ಮಾಡಿ, ಸಮುದ್ರದ ಮಧ್ಯೆ ಯಾವುದೇ ನೌಕೆ ಮುಳುಗಡೆಯಾಗಿಲ್ಲ ಹಾಗೂ ಆ ಮೂಲಕ ಆಯಿಲ್ ಮತ್ತು ಗ್ರೀಸ್ ಬರುವಂಥ ಪರಿಸ್ಥಿತಿ ಇಲ್ಲ ಎಂದು ವರದಿಯನ್ನು ಕೊಟ್ಟಿದ್ದಾರೆ. ಇವೊತ್ತು ನೂರು ಕಿ.ಮೀ. ಉದ್ದಕ್ಕೂ ಸಿದ್ಧಾಪುರ, ಸೂರತ್‌ಕಲ್, ಹೆಜಮಾಡಿ, ಪಡುಬಿದ್ರಿ ಹಾಗೂ ಬೈಂದೂರ್ ನಲ್ಲಿ ಕರಾವಳಿಯಲ್ಲಿ ಸಮುದ್ರ ನೋಡಲಿಕ್ಕೆ ಬಂದವರ ಕಾಲಿಗೆ ಆಯಿಲ್ ಮತ್ತು ಡಾಂಬರ್ ಮಿಕ್ಸ್ ಆಗಿದ್ದು ತಾಕುತ್ತದೆ. ಹಾಗಾದರೆ ಇದು ಎಲ್ಲಿಂದ ಬರುತ್ತದೆ ? ಇದು ಬೇರೆ ಎಲ್ಲಿಂದಾದರೂ ಬರಲೇಬೇಕಲ್ಲ. ಅದು ನೌಕೆ ಮುಳುಗಡೆಯಾಗಿದ್ದ ಕಾರಣ ಬಂದಿದ್ದಲ್ಲ ಎಂದು ಕೋಸ್ಟಲ್ ಗಾರ್ಡಿನ ವರದಿ ಪ್ರಕಾರ ಇದೆ. ಹಾಗಾದರೆ ಬೇರೆ ಯಾರಿಂದ ಬಂದಿರಬಹುದು. ಇದು ಎಂ.ಆರ್.ಪಿ.ಎಲ್. ದಿಂದ ಬಿಟ್ಟು ಬೇರೆ ಯಾರಿಂದಲೂ ಬರುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಗೆ ಯಾರು ಸಹಿ ಹಾಕಿರುತ್ತಾರೆ ಇದು ಅವರ ಮುಖ್ಯ ವಿಷಯ ಆಗಿರುತ್ತದೆ. ತಾವು ಎಂ.ಆರ್.ಪಿ. ಎಲ್. ಎಂದು ಹೇಳುತ್ತಿದ್ದೀರಿ. ಅವರೇನು ಎಂ.ಆರ್.ಪಿ.ಎಲ್. ಬಗ್ಗೆ ವಕಾಲತ್ತನ್ನು ವಹಿಸುತ್ತಿಲ್ಲ. ಅವರು ಹೇಳಿದ್ದುದು ಏನೆಂದರೆ ನಾವು ಫಿಶರೀಸ್ ಕಾಲೇಜಿಗೆ ಈ ವಿಷಯವನ್ನು ವಹಿಸಿಕೊಟ್ಟಿದ್ದೆವು, ಫಿಶರೀಸ್ ಕಾಲೇಜಿನವರು...

(ಗೊಂದಲ)

ಅಧ್ಯಕ್ಷರು : ಐ.ಎಂ. ಜಯರಾಮಶೆಟ್ಟಿಯವರೆ, ಕೆ. ಜಯರಾಮಶೆಟ್ಟಿಯವರೆ ತಾವು ಇಬ್ಬರೂ ಕುಳಿತುಕೊಳ್ಳಿ.

ಶ್ರೀ ಕೆ. ಜಯರಾಮಶೆಟ್ಟಿ : ನಾನು ಹೇಳುವುದು ಏನು ಎಂದರೆ ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಸರಿ ಇಲ್ಲ. ಈ ವಿಷಯ ಕೆ.ಡಿಪಿ. ಮೀಟಿಂಗ್‌ನಲ್ಲಿ ಕೂಡ ಪ್ರಸ್ತಾಪ ಆಗಿತ್ತು. ಆವಾಗ ಒಪ್ಪಿಕೊಂಡಿದ್ದಾರೆ.

ಶ್ರೀ ಐ.ಎಂ. ಜಯರಾಮಶೆಟ್ಟಿ : ಇದರಿಂದ ಮೀನಿನ ತಳಿಗಳಿಗೆ ತೊಂದರೆ ಉಂಟು. ಇದು ಬಹಳ ಗಂಭೀರವಾದಂಥ ಪ್ರಶ್ನೆ. ಇದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನ ಅಸ್ತವ್ಯಸ್ತ ಆಗುವಂಥ ಪರಿಸ್ಥಿತಿ ಇದೆ. ಇದಕ್ಕೆ ತಾವು ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕೆಂದು ನನ್ನ ಕಳಕಳಿಯ ವಿನಂತಿ. ನನ್ನ ಮತಕ್ಷೇತ್ರದಲ್ಲಿ ಪರಿಸರ ಎಷ್ಟು ಕೆಟ್ಟುಹೋಗಿದೆ ಎಂದರೆ ಅದನ್ನು ನಾನು ಹೇಳುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು : ಜಯರಾಮಶೆಟ್ಟಿಯವರೇ ತಾವು ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ತಾವು ಕುಳಿತುಕೊಂಡರೆ ಸ್ವಲ್ಪ ಸುಲಭವಾಗುತ್ತದೆ. ನಾನು ಏನು ಹೇಳುತ್ತಿದ್ದೆನೆಂದರೆ ಫಿಶರೀಸ್ ಕಾಲೇಜಿನಿಂದ ಬಂದಂಥ ವರದಿಯನ್ನು ಸರ್ಕಾರದವರು ಓದಿ ಹೇಳಿದ್ದಾರೆ. ನಾವು ಅದನ್ನೇ ಫೈನಲ್ ಎಂದು ತಿಳಿದುಕೊಳ್ಳುವುದು ಬೇಡ. ನಾವು ಮತ್ತೆ ಪೊಲ್ಯೂಷನ್ ಕಂಟ್ರೋಲ್ ಬೋರ್ಡಿನವರು ಕೊಡೋಣ.

(ಗೊಂದಲ)

ಅಧ್ಯಕ್ಷರು : ಈಗ ಪುನಃ ಇದನ್ನು ಯಾವುದಾದರೊಂದು ಸಂಸ್ಥೆಗೆ ಒಪ್ಪಿಸೋಣ. ಅವರು ಅದನ್ನು ಟೆಸ್ಟ್ ಮಾಡಿ, ಆನಾಲಿಸಿಸ್ ಮಾಡಿ ರಿಪೋರ್ಟ್ ಕೊಡಲಿ. ನಿಮ್ಮ ಅನಿಸಿಕೆ ಏನು? ನಿಮ್ಮ ಅಭಿಪ್ರಾಯದಲ್ಲಿ ಯಾರಿಗೆ ಕೊಟ್ಟರೆ ಸರಿ ಹೋಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಇದನ್ನು ಡಿಸ್‌ಚಾರ್ಜ್ ಪಾಯಿಂಟ್‌ನಲ್ಲಿ ಕಲೆಕ್ಟ್ ಮಾಡಿ ಆನಾಲೆಸಿಸ್‌ಗೆ ಕಳುಹಿಸಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ಆಗಬಹುದು. ನಿಮಗೆ ಸಮಾಧಾನ ಇದೆಯೇ

ಶ್ರೀ ಐ.ಎಂ. ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಹಿಂದಿನ ಮುಖ್ಯಮಂತ್ರಿಗಳ ಮನೆಯಲ್ಲಿ ಚರ್ಚೆಯಾದಾಗ ಈ ಡಿಸ್‌ಚಾರ್ಜ್ ಆದಂಥ ಫ್ಲುಯೆಂಟನ್ನು ಮೀನುಗಾರರಿಗೆ ತೋರಿಸಿ ಅದನ್ನು ಹೊರಗಡೆ ಕಳುಹಿಸುತ್ತೇವೆ ಎಂದು ಹೇಳಿದರು. ಇದು ಪ್ರಾಕ್ಟಿಕಲಿ ಮತ್ತು ಟೆಕ್ನಿಕಲಿ ಇಂಪಾಸಿಬಲ್. ಏಕೆಂದರೆ ಅದು ಸುಮಾರು ಮೂರು ಫೂಟ್ ಎತ್ತರಿಂದ ಡಿಸ್‌ಚಾರ್ಜ್ ಮಾಡುತ್ತಿದ್ದಾರೆ. ಓಪನ್ ಡಿಸ್‌ಚಾರ್ಜ್ ಮಾಡಿದ ಕೂಡಲೇ ಅದು ಕಂಪ್ಲೀಟಾಗಿ ಫೀಲ್ಡ್‌ನಲ್ಲಿ ಹೋಗುತ್ತದೆ. ಇವೊತ್ತು ನಾನು ಎಂ.ಆರ್.ಪಿ.ಎಲ್. ಬಗ್ಗೆ ನಿಮ್ಮ ಮುಂದೆ ಹೇಳಲು ಇಚ್ಛಿಪಡುವುದು ಏನೆಂದರೆ ಸರ್ಕಾರದ

ಜಿ.ಓ. ಆಗಲಿ ಸರ್ಕಾರದ ಮೆಮೊರಂಡಮ್ ಆಫ್ ಅಂಡರ್ ಸ್ಟ್ಯಾಂಡಿಂಗ್ ಆಗಲಿ ಅಥವಾ ಬೇಸಿಕ್ ಹ್ಯೂಮೆನ್ ಅವರು ಒಂದು ಚೂರು ಕನ್ಸಿಡರ್ ಮಾಡುವುದಿಲ್ಲ. ಅದರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯ ಜನರನ್ನು ಬಹಳ ತಾತ್ಸಾರ ಮನೋಭಾವದಿಂದ ನೋಡುವಂಥ ಸಂಸ್ಥೆಯಾಗಿದೆ ಎಂದು ಬಹಳ ನೊಂದು ಹೇಳುತ್ತಿದ್ದೇನೆ. ಅಲ್ಲಿನ ಜನಜೀವನದ ಬಗ್ಗೆ ಅಥವಾ ಅಲ್ಲಿನ ಮೀನುಗಾರರ ಬಗ್ಗೆ ಹೇಳುವುದಾದರೆ ಇದು ನಿಜವಾಗಿ ಗಂಭೀರವಾದ ಒಂದು ಜೀವನದ ಪ್ರಶ್ನೆ. ಇವೊತ್ತು ಪ್ರತಿಯೊಂದು ಕರಾವಳಿಯಲ್ಲಿ ತಾವು ಬಂದು ನೋಡಿದರೆ ಒಂದು bitaminous slump, it is nothing but a petro-chemical by-product in large quantity in ಟನ್ಸ್ ಇದರಲ್ಲಿ ಇದು ಕರಾವಳಿ ತೀರದಲ್ಲಿ ಇದೆ. ಈ ತೈಲ ಪದಾರ್ಥ ಸಮುದ್ರಕ್ಕೆ ಹೋದಾಗ ಸಣ್ಣ ಮೀನು ಮರಿ ಸತ್ತುಹೋಗುತ್ತದೆ. ದೊಡ್ಡ ಮೀನುಗಳು ಅದನ್ನು ತಿನ್ನುವುದರಿಂದ ನಾವು ಅದನ್ನು ತಿನ್ನುವುದರಿಂದ ನಮಗೆ ಕಾಯಿಲೆಯಾಗುವಂಥ ಒಂದು ವ್ಯವಸ್ಥೆ ಆಗುತ್ತಿದೆ. ಕಡಲ ತೀರದಲ್ಲಿ ಮೀನುಗಾರರು ಬಲೆ ಕಟ್ಟುವಂಥ ವ್ಯವಸ್ಥೆ ಇದೆ. ಅದನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಅದು ಅಲ್ಲದೆ ಆ ಪದಾರ್ಥ ಕೃಷಿಗೆ ಹೋದರೆ ಅದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ನಾಶ ಆಗುತ್ತಿದೆ. They are not processing this properly. They have not installed the re-cycling plant. Everywhere they take advantage of our weakness and they exploit the weakness of the South Kanara people and this has reached its maximum. It is the question of South Kanara people. It affects the total life of our South Kanara people. ಅದರ ಬಗ್ಗೆ ನಾನು ನಿಮ್ಮ ಹತ್ತಿರ ಹೇಳುತ್ತಿದ್ದೇನೆ. ಇಷ್ಟರವರೆಗೆ ಆಗಿದ್ದು ಆಗಿ ಹೋಯಿತು. ಇನ್ನಾದರೂ ಅದನ್ನು ಸರಿಪಡಿಸಿ ಸಾರ್. ನಾನು ಸಹ ಒಬ್ಬ ಇಂಜಿನಿಯರ್ ನನಗೂ ಸಹಿತ ವೈಜ್ಞಾನಿಕದ ಬಗ್ಗೆ ಅಭಿಮಾನ ಇದೆ. ವಿಶ್ವಾಸ ಇದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಅವರು ಕೊಟ್ಟಿರುವಂಥ ರಿಪೋರ್ಟ್ ಸರಿ ಇಲ್ಲ. ಅವರು ಸರಿಯಾಗಿದ್ದರೆ ಕಡಲ ತೀರದಲ್ಲಿ ಇಷ್ಟೊಂದು ಆಯಿಲ್, ಗ್ರೀನ್ ಎಲ್ಲಿಂದ ಬರುತ್ತಿತ್ತು?

ಅಧ್ಯಕ್ಷರು : ಒಂದು ನಿಮಿಷ ಜಯರಾಮಶೆಟ್ಟಿಯವರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಐ.ಎಂ. ಜಯರಾಮ ಶೆಟ್ಟಿ : ತಾವು ನೋಡಿರಬಹುದು ಮಾನ್ಯ ಅಧ್ಯಕ್ಷರೆ ಇದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನ ಅಸ್ತವ್ಯಸ್ತವಾಗಿದೆ. ಇದರ ಬಗ್ಗೆ ಲಕ್ಷಾಂತರ ಜನರು ಹೋರಾಟ ಮಾಡಿದ್ದಾರೆ. ಜನರು ರಕ್ತವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ನಿಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡವನ್ನು ನಾನು ಅರ್ಥ ಮಾಡಿಕೊಳ್ಳುವುದು ಕಷ್ಟ ಆಗುತ್ತದೆ. ಅದರಲ್ಲಿ ನಿಮ್ಮ ಸ್ಪೀಡ್ ಜಾಸ್ತಿ ಆದರೆ ಇದ್ದದ್ದೂ ಕಷ್ಟವಾಗುತ್ತದೆ.

ಶ್ರೀ ಐ. ಎಂ. ಜಯರಾಮ ಶೆಟ್ಟಿ : ಇನ್ನೇನು ಮಾಡುವುದು ಅಧ್ಯಕ್ಷರೆ, ನಮಗೆ ಟೈಮ್ ಕೊಡುವುದಿಲ್ಲ. ವಿಥಿನ್ ನೋ ಟೈಮ್ ಮುಗಿಸಬೇಕು ಎಂದು ಹೇಳುತ್ತೀರಿ. ಮಾನ್ಯ ಅಧ್ಯಕ್ಷರೆ ನಮಗೆ

ಸಮಯವೇ ಇಲ್ಲವಲ್ಲ. ಅದನ್ನು ತಾವು ಏಕೆ ಅರ್ಥ ಮಾಡಿಕೊಳ್ಳುವುದಿಲ್ಲ. ಇದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರ ಗಂಭೀರವಾದಂಥ ಸಮಸ್ಯೆ.

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ. ಮಾನ್ಯ ಸಚಿವರು ಫಿಶರೀಸ್ ಕಾಲೇಜಿನವರು ಕೊಟ್ಟಿರತಕ್ಕಂಥ ವರದಿಯೇ ಫೈನಲ್ ಅಥವಾ ಅದು ಇರ್ರಿವೋಕೇಬಲ್ ನಾನು ಬೇರೆ ಓಪಿನಿಯನ್ ಕೇಳುವುದಿಲ್ಲ ಎಂದು ಹೇಳಲಿಲ್ಲ. ಈಗಾಗಲೇ ಮಾಡಿದ್ದೇವೆ. ಇನ್ನೂ ಏನಾದರೂ ಸಲಹೆಗಳು ಇದ್ದರೆ, ಅದರ ಬಗ್ಗೆ ಬೇರೆ ಎನ್‌ಕ್ವಾಯರಿ ಮಾಡಿಸುತ್ತೇನೆ ಎಂದು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು : ಜಯರಾಶೆಟ್ಟಿಯವರೆ ಇಲ್ಲಿ ಹೇಳಿ. we must find a solution to your problem. ಈಗ ನಿಮ್ಮ ಸಮಸ್ಯೆ ಪರಿಹಾರ ಮಾಡಲಿಕ್ಕೆ ಬೇರೆ ಏನು ಮಾಡಿದರೆ ಆ ಸಮಸ್ಯೆ ಬಗೆಹರಿಯುತ್ತದೆ ಅದನ್ನು ಹೇಳಿ.

ಶ್ರೀ ವಸಂತ ವಿ. ಸಾಲಿಯಾನ : ಇದಕ್ಕೆ ಸದನದ ಸಮಿತಿಯನ್ನು ಮಾಡಬಹುದಲ್ಲ.

MR. SPEAKER : House Members are not experts.

SRI VASANTH V. SALIANA : Sir, if any technical people has visited, they would have known it...

(ಗೊಂದಲ)

ಶ್ರೀ ಎನ್. ಯೋಗೀಶ್ ಭಟ್ : ಕಾಳಿನದಿ ಪೊಲ್ಯೂಷನ್‌ನಿಂದ ಯಾವ ರೀತಿ ಕಪ್ಪಗೆ ಆಗುತ್ತಿದೆ ಅದೇ ರೀತಿ ಹರಿಹರ ಪಾಲಿಫೈಬರ್ಸ್‌ನಿಂದ ತುಂಗಾ ನದಿಯಲ್ಲಿ ಕೂಡ ಪೊಲ್ಯೂಷನ್ ಆಗುತ್ತಿದೆ. ಈ ಬಗ್ಗೆ ವೆರಿಫೈ ಮಾಡಲಿಕ್ಕೆ ಸಮಿತಿಯವರು ಅಲ್ಲಿ ಹೋಗಿ ನೋಡಿದಾಗ ರೀ ಸೈಕ್ಲಿಂಗ್ ಪರ್‌ಫೆಕ್ಟ್ ಆಗಿ ಮಾಡುತ್ತಿದ್ದರು. ಆ ನಂತರ ಯಥಾ ಪ್ರಕಾರವಾಗಿ ಡಿಸ್‌ಚಾರ್ಜ್‌ನ್ನು ಆಕ್ಸ್ ಇಟೀಸ್ ನದಿಗೆ ಬಿಡುತ್ತಿದ್ದಾರೆ. ನಮ್ಮ ಗಮನಕ್ಕೆ ಬಂದಿರೋದು ಇಷ್ಟೇ. ವಾಚ್ ಮಾಡದೇ ಇರುವ ಕಡೆ ಎಂ.ಆರ್. ಪಿ.ಎಲ್. ನವರ ಕಡೆನವರು ತ್ಯಾಜ್ಯವನ್ನು ನೇರವಾಗಿ ಸಮುದ್ರಕ್ಕೆ ಬಿಡುತ್ತಿದ್ದಾರೆ. ಇದರಿಂದ ವಿಟಮಿನ್ ಎಲ್ಲ ಸ್ಪೈಡ್ ಆಗುತ್ತಿದೆ. ಯಾವುದೇ ಕಾರಣಕ್ಕೆ 1993ರಲ್ಲಿ ಆದಂಥ ಘಟನೆಗೆ ಮತ್ತು ಇದಕ್ಕೆ ಕಂಪ್ಯಾರಿಸನ್ ಮಾಡುವುದು ಸೂಕ್ತವಲ್ಲ. ಆ ಸಂದರ್ಭದಲ್ಲಿ ಶಿಪ್ ಬ್ರೇಕಿಂಗ್‌ದಿಂದ ಏನೋ ಆಗಿರಬಹುದು. ಆದರೆ ಆ ತರಹ ವಿಟಮಿನ್ಸ್, ಖಂಡಿತವಾಗಿ ಲೇಯರಾಗಿ ಉಳಿಯುತ್ತಿರಲಿಲ್ಲ. ಆದ್ದರಿಂದ ಇದು ಎಂ.ಆರ್.ಪಿ.ಎಲ್‌ಗೆ ಸೇರಿದ ತ್ಯಾಜ್ಯ ಎಂದು ಹೇಳುವುದರಲ್ಲಿ ಖಂಡಿತವಾಗಿ ಸಂಶಯವಿಲ್ಲ. ಆದ್ದರಿಂದ ಈ ಅನಾಹುತದಿಂದ ಏನು ಲಕ್ಷಾಂತರ ಮೀನುಗಾರರಿಗೆ ಮತ್ಸ್ಯ ಕ್ಷಾಮ ಉಂಟಾಗಿದೆ. ಅವರಿಗೆ ಎಂ.ಆರ್.ಪಿ.ಎಲ್.ದಿಂದ ನೇರವಾಗಿ ಪರಿಹಾರವನ್ನು ಕೊಡಿಸುವಂತಹ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕು. ಇನ್ನು ಎರಡನೆಯದಾಗಿ ಅವರ ಬೇಡಿಕೆ ಏನು ಇದೆ

ಅದನ್ನು ಎಂ.ಆರ್.ಪಿ.ಎಲ್. ನವರಿಂದ ಮೀಟ್ ಮಾಡಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ನೇರವಾಗಿ ಸಚಿವರು ಅವರು ಖಂಡಿತ ಜವಾಬ್ದಾರಿ ಇಲ್ಲವೆಂದು ಹೇಳಬಹುದು ಆದರೆ ಅವರು ಈ ರೀತಿ ಹೇಳಲಿಕ್ಕೆ ಹೋಗಲಿಲ್ಲ. ಆದರೂ ಕೂಡ ಲ್ಯಾಬೋರೆಟರಿಯ ಏನು ರಿಪೋರ್ಟ್ ಇದೆ, ಅದು ಕೇವಲ ಒಂದು ಸೈಡೆಡ್ ಮಾತ್ರ ಸಿಕ್ಕಿದೆ ವಿನಹ ಪೂರ್ತಿ ಮಾಹಿತಿ ಸಿಕ್ಕಿಲ್ಲ. ಆದ್ದರಿಂದ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಇದರಲ್ಲಿ ಎಂ.ಆರ್.ಪಿ.ಎಲ್.ನವರದು ಬಿಟ್ಟು ಬೇರೆ ಯಾವುದೇ ತ್ಯಾಜ್ಯದಿಂದ ಆದದ್ದು ಇಲ್ಲ. ಇನ್ನು ಎರಡನೆಯದು ಬಿ.ಎಸ್.ಎಫ್.ಎಸ್. ಸಂಸ್ಥೆ ಯಾವುದು ಇದೆ ಅದು ಜಗತ್ತಿನಲ್ಲಿ ಇರತಕ್ಕಂಥ ತ್ಯಾಜ್ಯ ಅಷ್ಟೇ ಅಲ್ಲ ಆರೆಸೇನಿಕ್ ಸೈಯನೇಡ್‌ದಂಥ ವಿಷಪೂರಿತ ಕಂಟೇಂಟ್ ಕೂಡ ಸಮದ್ರಕ್ಕೆ ಬಿಡುತ್ತಿದ್ದಾರೆ. ಇಷ್ಟು ಸಂಗತಿಗಳು ಇಲ್ಲಿ ಆಗುತ್ತಿರುವುದರಿಂದ ಯಾವುದೇ ಸಂದರ್ಭದಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ನಾನು ಹೇಳಲಿಕ್ಕೆ ಹೋಗುವುದಿಲ್ಲ ಮತ್ಸ್ಯ ಕ್ಷಾಮ ಮಾತ್ರವಲ್ಲ ಮೂರು ಲಕ್ಷ ಮೀನುಗಾರರು ನಿರುದ್ಯೋಗಿಗಳಾಗುವ ಸಾಧ್ಯತೆ ಇದೆ. ಮುಂದೆ ಸರ್ಕಾರ ಯಾವುದೇ ರೀತಿಯ ಕಾಂಪೆನ್‌ಸೇಶನ್ ಕೊಡುವ ಸ್ಥಿತಿಯಲ್ಲಿ ಬರಲಿಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ತಕ್ಷಣ ನಿಗಾವಹಿಸಿ, ಏನು ಪರಿಹಾರ ನಿಮ್ಮ ಕಡೆಯಿಂದ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅಂದರೆ ಘಟಕಗಳನ್ನು ನಿಲ್ಲಿಸುವ ಜವಾಬ್ದಾರಿ ಸರ್ಕಾರಕ್ಕೆ ಇದೆ ಅದನ್ನು ಮಾಡಬೇಕು. ಈಗ ನಮ್ಮ ಮುಂದೆ 3 ಲಕ್ಷ ಮೀನುಗಾರರನ್ನು ಉಳಿಸಬೇಕೋ ಅಥವಾ ಎಮ್‌ಆರ್‌ಪಿಯಲ್‌ದ ಪ್ಲಾಟ್ಸ್‌ಗಳನ್ನು ಉಳಿಸಬೇಕೋ ಎನ್ನುವ ಸಮಸ್ಯೆ ಬಂದಿದೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, 1995ನೇ ಇಸ್ವಿಯಲ್ಲಿ ಎಮ್‌ಆರ್‌ಪಿಯಲ್ ಚಳುವಳಿ ಏನು ಆಯಿತು ಅದು ತಮಗೆ ಗೊತ್ತೇ ಇದೆ. 1995ನೇ ಇಸ್ವಿಯಲ್ಲಿ ಸರ್ಕಾರಿ ಆಜ್ಞೆ ಏನು ಆಗಿದೆ, 1997ನೇ ಡಿಸೆಂಬರ್ ಒಳಗೆ ಎಮ್‌ಆರ್‌ಪಿಯಲ್‌ದವರು ರಿಸೈಕಲಿಂಗ್‌ಗೆ ಯೂನಿಟನ್ನು ಮಾಡಬೇಕು ಎಂದು ಇದೆ. ಆದರೆ, ಅವರು ರಿಸೈಕಲಿಂಗ್ ಯೂನಿಟ್‌ನ್ನು ಮಾಡದೆ, ಮೊನ್ನೆ ಜೂನ್ ಒಂದಕ್ಕೆ ತ್ಯಾಜ್ಯ ವಸ್ತುಗಳನ್ನು ಸಂಪೂರ್ಣವಾಗಿ ಸಮುದ್ರಕ್ಕೆ ಬಿಟ್ಟು ಬಿಟ್ಟಿದ್ದಾರೆ. ಮತ್ತೆ ಅವರ ಹತ್ತಿರವೇ ಪರಿಸರ ಇಲಾಖೆಯವರು ಅನಾಲಿಸಿಸ್‌ಗೆ ಹೋಗುತ್ತಿದ್ದಾರೆ ಎಂದರೆ ಎಷ್ಟು ಕ್ಷೇಮ. ನಮ್ಮ ಪರಿಸ್ಥಿತಿ ಏನು ಆಗಿದೆ ಎಂದರೆ, ನನಗೆ ಮೀನುಗಾರಿಕೆ ಸಚಿವರ ಮೇಲೆ ಆರೋಪ ಇಲ್ಲ. ಇವತ್ತು ಎಮ್‌ಆರ್‌ಪಿಯಲ್ ಅದರ ಜೊತೆಯಲ್ಲಿ ಇನ್ನೊಂದು ಭಾರ್ಕ್ ಎನ್ನುವ ಕಂಪನಿ ಇದೆ. ಬಿಯಎಸ್‌ಎಫ್ ಬೇರೆ ಇದೆ, ಈ ಗಲಾಟೆಯಲ್ಲಿ ಅದರ ಹೆಸರು ಬರುತ್ತಾ ಇಲ್ಲ. ಇದು ಅದಕ್ಕಿಂತ ಡೇಂಜರ್ ಸೈನೆಡ್‌ಗಳನ್ನು, ತ್ಯಾಜ್ಯವಸ್ತುಗಳನ್ನು ಹೊರಕ್ಕೆ ಹಾಕುವಂತ ಭಾರ್ಕ್ ಕಂಪನಿ, ಇವರು ಕೂಡ ರಿಸೈಕಲಿಂಗ್ ಯೂನಿಟ್ ಮಾಡಿದೆ, ಇರುವುದರಿಂದ ಇವತ್ತು ಈ ಪರಿಸ್ಥಿತಿ ಮೀನುಗಾರರಿಗೆ ಬಂದಿದೆ. ಕಳೆದ ಎರಡು ವರ್ಷಗಳಿಂದ ಈ ಸದನದಲ್ಲಿ ನಾನು ಈ ಎರಡು ಕಂಪನಿಗಳ ಬಗ್ಗೆ ಮಾತನಾಡುತ್ತಿದ್ದೇನೆ. ಆಗ ನನಗೆ ಎಲ್ಲರೂ ಇದು ಸುಳ್ಳು ಎಂದು ತಮಾಷೆ ಮಾಡಿದ್ದರು. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಜೂನ್ ತಿಂಗಳಿಂದ ಆಗಸ್ಟ್ 3 ರವರೆಗೆ ನಾಡದೋಣಿ ಮೀನುಗಾರರಿಗೆ ಯಾವುದೇ ಸವಲತ್ತು ಸಿಗುತ್ತಾ ಇಲ್ಲ.

ಅಧ್ಯಕ್ಷರು : ಅದಕ್ಕೆ ಪರಿಹಾರವನ್ನು ಹೇಳಿ.

ಶ್ರೀ ಯು.ಆರ್. ಸಭಾಪತಿ : ಪರಿಹಾರ ಇದೆ. ಅದಕ್ಕೆ ಎಮ್ಆರ್‌ಪಿಯಲ್ ಮತ್ತು ಭಾರ್ಕ್ ಸಂಸ್ಥೆಗಳ ಆ ತ್ಯಾಜ್ಯವಸ್ತುಗಳು ಏನು ಇವೆ, ರಿಸೈಕಲಿಂಗ್ ಮಾಡದೆ ಇರುವುದರಿಂದ ಇದು ಆದಂತಹ ಅನಾಹುತವಾಗಿದೆ. ಆದ್ದರಿಂದ ನಾವು ಏನು ಟಾರ್ಗೆಟ್‌ನ್ನೂ ಫಿಕ್ಸ್ ಮಾಡಿದ್ದೆವೆ. ಅವರು ಸರ್ಕಾರಕ್ಕೆ ಸಹಾಯಧನ ಕೊಡಲು ಆಗದಿದ್ದರೆ, ಅವರಿಂದ ವಸೂಲಿ ಮಾಡಿಯಾದರೂ ತೆಗೆದುಕೊಳ್ಳಬೇಕು. ನಮ್ಮ ಸರ್ಕಾರ ಮಾಡಿದ ಆಜ್ಞೆಯಲ್ಲಿಯ ಒಂದೇ ಒಂದು ಕಾರ್ಯವನ್ನು ಸಹ ಅವರು ಇಂಪ್ಲಿಮೆಂಟ್ ಮಾಡಿಲ್ಲ. ಮೊನ್ನೆ ಪಾರ್ಲಿಮೆಂಟ್ ಕಮಿಟಿ ಬಂದು ಸಾಕಷ್ಟು ಮಾಹಿತಿಯನ್ನು ತೆಗೆದುಕೊಂಡು ಹೋಗಿದೆ.

ಅಧ್ಯಕ್ಷರು : ಜಯರಾಮ್ ಶೆಟ್ಟರೆ ಇದು ಗಮನ ಸೆಳೆಯುವ ಸೂಚನೆ, ಇದರಲ್ಲಿ ಅವರು ಒಬ್ಬರೆ ಸಿಗ್ನೇಟರಿ, ಆದರೆ ತಮ್ಮ ಜಿಲ್ಲೆಯ ಪ್ರಮುಖವಾದ ವಿಚಾರವಾಗಿದ್ದರಿಂದ ಎಲ್ಲರಿಗೂ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಹೀಗಾದರೆ, ನಾನು ಇಲ್ಲಿ ಕಳಿತು ಸದನವನ್ನು ನಡೆಸಲು ಆಗುವುದಿಲ್ಲ. ಶೂನ್ಯವೇಳೆಯನ್ನು 3 ಗಂಟೆ ಮಾಡುತ್ತೀರಿ, ನಿಲುವಳಿ ಸೂಚನೆಗೆ ಪ್ರಸ್ತಾವಿಕ ಮನವಿಯನ್ನು 4 ಗಂಟೆ ಮಾಡುತ್ತೀರಿ, ಕಾಲಿಂಗ್ ಅಟೆನ್‌ಷನ್ ಎರಡುವರೆ ಗಂಟೆ ಮಾಡುತ್ತೀರಿ, ಹೀಗೆ ಮಾಡಿದರೆ ಬೆಳಗಿನ ಜಾವ 6 ಗಂಟೆಯಿಂದ ಮಧ್ಯರಾತ್ರಿ ಒಂದು ಗಂಟೆವರೆಗೆ ವಿಧಾನಸಭೆಯನ್ನು ನಡೆಸಬೇಕಾಗುತ್ತದೆ. ನಾವು ಏನು ಅಜೆಂಡಾದಲ್ಲಿ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೇವೆ, ಅವುಗಳನ್ನು ನಡೆಸಲು ಆಗುವುದಿಲ್ಲ. ಇದಕ್ಕೆ ತಮ್ಮ ಎಲ್ಲರ ಸಹಕಾರಬೇಕು

ಶ್ರೀ ಯು.ಆರ್. ಸಭಾಪತಿ : ಈ ಬಗ್ಗೆ ಮಾಹಿತಿಯನ್ನು ಪಡೆಯಲು ದೂರದರ್ಶನದವರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಾಗ, ನಮ್ಮ ಜಲ್ಲೆಯ ಜಿಲ್ಲಾಧಿಕಾರಿಗಳು, ಮತ್ತು ಪೋಲೀಸ್ ಸೂಪರಿಂಟೆಂಡೆಂಟ್‌ರವರು ಅವರಿಗೆ ರಕ್ಷಣೆಯನ್ನು ನೀಡಲು ಹೋಗಲಿಲ್ಲ. ಅವರನ್ನು ಹತ್ತಿರ ಹೋಗಲು ಬಿಡಲಿಲ್ಲ. ದೂರದರ್ಶನದವರು ಸೂಟಿಂಗ್ ಮಾಡಿ ಅಲ್ಲಿ ಏನು ಮಾಹಿತಿ ಇದೆ ಎಂದು ಸಂಗ್ರಹಣೆ ಮಾಡಲು ಬಂದಾಗ ಜಿಲ್ಲಾಧಿಕಾರಿಗಳು ಮತ್ತು ಪೋಲಿಸ್ ಸೂಪರಿಂಟೆಂಡೆಂಟರು ರಕ್ಷಣೆಯನ್ನು ಕೊಡಬೇಕೇ ಅಥವಾ ಬೇಡವೇ? ಆ ಇಡೀ ತಂಡ ಹಾಗೆ ಖಾಲಿ ಕೈಯಲ್ಲಿ ವಾಪಸ್ಸು ಬಂದಿದೆ. ಇದಕ್ಕೆ ತಮ್ಮಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಅದು ಏಕೆ ಹೀಗಾಗುತ್ತದೆ?

ಶ್ರೀ ಕೆ. ಜಯರಾಮ್ ಶೆಟ್ಟಿ : ಇದು ಬಹಳ ಗಂಭೀರವಾದ ಪ್ರಶ್ನೆ. ನಮ್ಮಕರಾವಳಿ ಪ್ರದೇಶದಲ್ಲಿನ ಬದುಕಿನ ಪ್ರಶ್ನೆ.

ಅಧ್ಯಕ್ಷರು : ತ್ಯಾಜ್ಯ ವಸ್ತುಗಳು ಸಮುದ್ರಕ್ಕೆ ಬರುವುದು ಗಂಭೀರ, ಟೋಮೇಟೋ ವಿಚಾರ ಗಂಭೀರ, ವೀರಪ್ಪನ್ನ ವಿಚಾರ ಗಂಭೀರ, ಗಂಭೀರ ಇಲ್ಲದೆ ಇರುವುದನ್ನು ಇಲ್ಲಿ ಚರ್ಚೆ ಮಾಡುವುದಿಲ್ಲ. ಸಮಯವನ್ನು ನೀವೇ ನಿಗದಿ ಮಾಡಿ, ನಿಮ್ಮ ಎಲ್ಲ ಮುಖಂಡರು ಒಂದು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಕುಳಿತು ಈ ಕಲಾಪಗಳನ್ನು ನಿಗದಿ ಮಾಡಿದ್ದು ನೀವೇ ನಾನು ನಿಗದಿ ಮಾಡಲಿಲ್ಲ.

ಶ್ರೀ ಐ. ಎಮ್. ಜಯರಾಮ್ ಶೆಟ್ಟಿ : ನಮಗೆ ನೀವು ಮಾತನಾಡಲು ಇಷ್ಟು ಸಮಯ ಎಂದು ಕೊಡಿ.

ಅಧ್ಯಕ್ಷರು : ಜಯರಾಮಶೆಟ್ಟಿಯವರೆ ನೀವು ಕುಳಿತುಕೊಳ್ಳಿ, ನೀವು ಇಬ್ಬರು ಹೊಸದಾಗಿ ಬಂದಿದ್ದೀರಿ, ನಾವು ಇವತ್ತು ಬೆಳಿಗ್ಗೆ 10-15ರಿಂದ ಕುಳಿತಿದ್ದೇವೆ. ಈಗ ಆರೂವರೆ ಗಂಟೆಯಾದರೂ ಇನ್ನು ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭಮಾಡಿಲ್ಲ, ಹೀಗಾದರೆ ನಾವು ಏಕೆ ಬೇಡಿಕೆಗಳ ಮೇಲೆ ಚರ್ಚೆಯನ್ನು ಇಟ್ಟುಕೊಳ್ಳಬೇಕು? ಯಾವ ಪುರುಷಾರ್ಥಕ್ಕಾಗಿ ಇಟ್ಟುಕೊಳ್ಳಬೇಕು? ಯಾವುದೇ ವಿಚಾರ ಚರ್ಚೆಮಾಡುವಲ್ಲಿ ನನಗೆ ಆಕ್ಷೇಪಣೆ ಇಲ್ಲ. ಆದರೆ ಸಮಯವನ್ನು ಹೇಗೆ ನಿಗದಿ ಮಾಡುವುದು ಎಂಬುದು ನನ್ನ ಸಮಸ್ಯೆ. ಪ್ರಶ್ನೆಗೆ ಉತ್ತರಿಸಲು ಮುಕ್ಕಾಲುಗಂಟೆ ಮಾಡುತ್ತೀರಾ.

ಶ್ರೀ ಐ.ಎಮ್. ಜಯರಾಮ ಶೆಟ್ಟಿ : ನಮ್ಮ ಶಾಸಕರಿಗೆ ಎಷ್ಟು ಸಮಯ ಕೊಡುತ್ತೀರಿ ಕೊಡಿ ಅಷ್ಟರಲ್ಲಿ ನಾವು ಮುಗಿಸುತ್ತೇವೆ. ಆದರೆ ನಮಗೆ ಸಮಯವನ್ನೆ ಕೊಡದೆ ಇದ್ದರೆ, ನಾವು ಇಲ್ಲಿ ಒಂದು ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಯು.ಆರ್.ಸಭಾಪತಿ : ಇನ್ನು ಸ್ವಲ್ಪ ಸಮಯವನ್ನು ಕೊಟ್ಟರೆ, ಇನ್ನಷ್ಟು ಮಾಹಿತಿಯನ್ನು ಸಂಗ್ರಹಣೆ ಮಾಡಿ ತಮಗೆ ಕೊಡುತ್ತೇವೆ.

ಅಧ್ಯಕ್ಷರು : ನನಗೆ ಚರ್ಚೆಯನ್ನು ಮೊಟಕು ಮಾಡಬೇಕೆಂಬ ಉದ್ದೇಶವಿಲ್ಲ. ಸಮಯವನ್ನು ಹೇಗೆ ನಿಗದಿ ಮಾಡುವುದು ಎಂದು ನನ್ನ ಸಮಸ್ಯೆ ಅಷ್ಟೆ. ಇಲ್ಲಿ ಸಗೀರ್ ಅಹಮದ್ ಅವರು ಮಲೆನಾಡ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಭಾಷಣ ಮಾಡುವುದು ಇದೆ, ಅದಕ್ಕೆ ನಾನು ಹೋಗುತ್ತೇನೆ ಎಂದು ಹೇಳುತ್ತಾರೆ. ಆದರೆ ನಾನು ಇಲ್ಲಪ್ಪ ನಾಳೆ ಇದನ್ನು ಓಟಿಗೆ ಹಾಕಬೇಕು ನಾನು ಕಳುಹಿಸುವುದಿಲ್ಲ. ನಮ್ಮ ಚೀಪ್ ಅವರು ಬರೆದು ಕಳುಹಿಸಿದ್ದಾರೆ. ಮಲೆನಾಡು ಅಭಿವೃದ್ಧಿ ಸಮಿತಿಯನ್ನು ಮುಂದಕ್ಕೆ ಹಾಕಿ, ಇವತ್ತು ಎಷ್ಟೇ ಸಮಯವಾದರೂ ಚರ್ಚೆ ಮುಗಿಯಲೇಬೇಕು ಎಂದು ಹೇಳಿದ್ದಾರೆ. ನನ್ನ ಕಷ್ಟ ನೀವು ಅರ್ಥಮಾಡಿಕೊಳ್ಳಬೇಕು.

ಶ್ರೀ ಕೆ. ಜಯರಾಮಶೆಟ್ಟಿ : ಈ ಸಭೆಯ ಕೊನೆಯಲ್ಲಿ ಈ ವಿಷಯವನ್ನು ಚರ್ಚೆ ಮಾಡಲು ಅರ್ಧಗಂಟೆ ಕಾಲವಕಾಶ ಕೊಡಿ, ಆಗ ಬೃಹತ ಕೈಗಾರಿಕಾ ಮಂತ್ರಿಗಳು ಇರಬೇಕು.

ಅಧ್ಯಕ್ಷರು : ದಕ್ಷಿಣ ಕನ್ನಡದ ಶಾಸಕರೆಲ್ಲ ನೆನಪಿನಲ್ಲಿ ಇಟ್ಟುಕೊಳ್ಳಬೇಕು, ಬೃಹತ್ ಕೈಗಾರಿಕಾ ಬೇಡಿಕೆಗಳ ಮೇಲೆ ಚರ್ಚೆಯನ್ನು ತೆಗೆದುಕೊಳ್ಳುತ್ತೇವೆ. ಆಗ ಈ ವಿಷಯವನ್ನು ಪ್ರಸ್ತಾಪ ಮಾಡಬಹುದು. ಕೆ. ಜಯರಾಮ ಶೆಟ್ಟಿಯವರು ಕೇಳಿದಂತೆ ಅಧಿವೇಶನದ ಕೊನೆಯಲ್ಲಿ ಅರ್ಧಗಂಟೆ ಈ ವಿಷಯವನ್ನು ಚರ್ಚೆ ಮಾಡೋಣ, ಇದಕ್ಕೆ ತಮ್ಮ ಎಲ್ಲರ ಒಪ್ಪಿಗೆ ಇದೆ ಅಲ್ಲವೇ? ಈಗ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ ಸಗೀರ್ ಅಹಮದ್ ಅವರು ಭಾಷಣವನ್ನು ಪ್ರಾರಂಭಿಸುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ನನಗೆ ಏನು ಸಮಸ್ಯೆ ಇಲ್ಲ. ಆದರೆ ನಾನು ಒಬ್ಬ ಮಲೆನಾಡು ಅಭಿವೃದ್ಧಿ ಮಂಡಳಿ ಸದಸ್ಯನಾಗಿರುವುದರಿಂದ ನನಗೆ ನೋಟೀಸ್ ಕಳುಹಿಸಿದ್ದಾರೆ. ನಾವು ಅನೇಕ ಜನ ಮಲೆನಾಡು ಅಭಿವೃದ್ಧಿ ಸಮಿತಿಗೆ ಹೋಗಬೇಕಾಗಿದೆ. ಏಕೆಂದರೆ ನಮ್ಮ ಶಾಸಕರ ಗೌರವ ಅದರಲ್ಲಿ ಉಳಿದಿರುವುದು, ಅಲ್ಲದೆ ಮಂಡಳಿಯ ವತಿಯಿಂದ ನಮ್ಮ-ನಮ್ಮ ಮತ ಕ್ಷೇತ್ರಕ್ಕೆ ಸ್ವಲ್ಪ ಹಣ ಸಿಗುತ್ತದೆ. ಹೋಗದಿದ್ದರೆ ಅದನ್ನು ಕಳೆದುಕೊಂಡು ಬಿಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಹೋಗದಿದ್ದರೆ ಕೊಡುವುದಿಲ್ಲವೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಕೊಟ್ಟರು ಸ್ವಲ್ಪ ವ್ಯತ್ಯಾಸವಾಗುತ್ತದೆ. ತಾವೇ ಬೆಳಿಗ್ಗೆ ಲೋಕೋಪಯೋಗಿ ಸಚಿವರು ಎಷ್ಟು ವ್ಯತ್ಯಾಸ ಮಾಡಿದ್ದಾರೆ ಎಂದು ಹೇಳಿದ್ದಿರಿ ನೀವು ಇರಲಿಲ್ಲ ಎಂದು ಕಾಣುತ್ತದೆ. ಬೆಳಿಗ್ಗೆ ಪೇಪರ್ ಹರಿದು ಹೋದವರು ಈಗ ಬಂದಿದ್ದೀರಿ.

ಅಧ್ಯಕ್ಷರು : ಅವರ ಕಣ್ಣಿಗೆ ನೀವು ಹಾಗೆ ಕಾಣುತ್ತಿದ್ದೀರಿ, ನಾನೇನು ಮಾಡಲಿ.

ಶ್ರೀ ವಾಟಾಳ್ ನಾಗರಾಜ್ : ಕಾಂಗ್ರೆಸ್‌ನವರು ಏನು ಬೇಕಾದರೂ ಹೇಳಬಹುದೇ ಇಲ್ಲಿ? ಒಟ್ಟಾರೆ ಕಾಂಗ್ರೆಸ್‌ನವರಲ್ಲ ಸಗೀರ್ ಅಹಮದ್ ಮಾತ್ರ, ಏಕೆಂದರೆ ನಮ್ಮ ಖರ್ಗೆಯವರು ಇಡೀ ಕಾಂಗ್ರೆಸ್‌ಗೆ ಹೇಳುತ್ತಿದ್ದಾರೆ ಎಂದು ನೋಡುತ್ತಿದ್ದಾರೆ.

ಅಧ್ಯಕ್ಷರು : ಸದನದಲ್ಲಿ ನೀವು ಯಾರನ್ನು ನಂಬಬೇಕಾಗಿಲ್ಲ, ನಾನು ಆಯಿತು, ನೀವಾಯಿತು ಅಷ್ಟೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇತ್ತೀಚೆಗೆ ಒಂದು ದಿವಸಾನು ತಮ್ಮ ಛೇಂಬರ್‌ಗೆ ಬಂದಿದನ್ನು ನಾನು ನೋಡಲಿಲ್ಲ.

ಅಧ್ಯಕ್ಷರು : ಸ್ವಲ್ಪ ಮುನಿಸಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮನಿಮ್ಮಮುನಿಸು ಇಲ್ಲಿ ಚರ್ಚೆ ಆಗುವುದು ಬೇಡ, ಅಧ್ಯಕ್ಷರು ಮುಖ್ಯಮಂತ್ರಿಗಳನ್ನು ಇಲ್ಲಿಗೆ ಕರಿಯಿಸಿ ಬಿಡಲಿ ಅವರೇ ಬಂದು ಏನು ಆಗಿದೆ ವಿಚಾರ ಮಾಡಿ ತೀರ್ಮಾನ ಮಾಡಿ ಬಿಡಲಿ. ತಾವು ಕೇಳಲಿಲ್ಲ ಎಂದು ಕಾಣುತ್ತದೆ. ನಮ್ಮ ಅವರ ಮುನಿಸು ಬಹಿರಂಗವಾಗಿ ಚರ್ಚೆ ಆಗುವುದು ಬೇಡ, ನಿಮ್ಮ ಎದುರಿಗೆ ಮುಗಿದು ಹೋಗಲಿ.

ಅಧ್ಯಕ್ಷರು : ನಾವು ಇಬ್ಬರು ಅವರ ಜೊತೆ ಕೆಲಸಕ್ಕೆ ಬರುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸರ್. ಈಗ ಏನು ಮಾಡುವುದು ಹೇಳಿ. ನೀವು ಹೇಳಿದ ಹಾಗೆ ಭಾಷಣವನ್ನು ಬಿಗಿಯಬಹುದು. ಆದರೆ, ಕ್ರಿಕೆಟ್ ಮ್ಯಾಚ್‌ನಲ್ಲಿ ಬೌಲಿಂಗ್ ಮಾಡಿದವನಿಗೆ ಬ್ಯಾಟಿಂಗ್ ಕೊಡುತ್ತಾರಲ್ಲ ಆ ಸ್ಥಿತಿಗೆ ನಮ್ಮನ್ನು ತಂದಿದ್ದಿರಿ. ನಮ್ಮನಾಯಕರು ಸಾಕಷ್ಟು ಸಮಯವನ್ನು ತೆಗೆದುಕೊಂಡು ಚರ್ಚೆ ಮಾಡಿದ್ದರು ಎಂದು ತಾವೇ ಹೇಳಿದ್ದಿರಿ ಪ್ರಶ್ನೋತ್ತರಕ್ಕೆ ಕಾಲುಗಂಟೆ ಹೋಯಿತು.

ಅಧ್ಯಕ್ಷರು : ನಾನು ಏನು ಮಾಡಲಿ, ಹಾಗಾದರೆ ತಾವು ಎಲ್ಲರು ಒಂದು ಕೆಲಸವನ್ನು ಮಾಡಿ ಸಭೆಯನ್ನು ನಾಳೆ ಬೆಳಿಗ್ಗೆ ಎಂಟು ಗಂಟೆಗೆ ಪ್ರಾರಂಭಿಸಲು ಒಪ್ಪಿಕೊಳ್ಳಿ. ಶಾಸನ ಸಭೆ ನಡೆಯುವಾಗ ಮಲೆನಾಡ ಅಭಿವೃದ್ಧಿ ಸಮಿತಿ ನಡೆಯಬೇಕು, ಬಯಲು ಸೀಮೆ ಅಭಿವೃದ್ಧಿ ಸಮಿತಿ ನಡೆಯಬೇಕು ಎಂದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಲೆನಾಡು ಅಭಿವೃದ್ಧಿ ಸಮಿತಿಯಲ್ಲಿ ಕನಿಷ್ಟ 60-70 ಜನ ಸದಸ್ಯರು ಇರುತ್ತಾರೆ, ಆದ್ದರಿಂದ ಅದನ್ನು ಶನಿವಾರ ಅಥವಾ ಶುಕ್ರವಾರ ರಾತ್ರಿ ಇಟ್ಟುಕೊಂಡರು ನಡೆಯುತ್ತದೆ.

6.40 ಪಿ.ಎಂ

ಅಧ್ಯಕ್ಷರು : ಹಾಗಾದರೆ ಲಿಂಗಪ್ಪನವರು ಮಾತನಾಡಲಿ, ಅವರೇನೂ ಮಲೆನಾಡು ಅಭಿವೃದ್ಧಿ ಸಮಿತಿ ಸೇರುವುದಿಲ್ಲವಲ್ಲ. ಅವರು ರಾಮನಗರ ಬಯಲು ಸೀಮೆ ತಾನೆ. ಆದುದರಿಂದ ಅವರು ಮಾತನಾಡಲಿ. ಸಗೀರ್‌ರವರೆ ನೀವು ಬೇಕಾದರೆ ಮಲೆನಾಡು ಅಭಿವೃದ್ಧಿ ಸಮಿತಿಗೆ ಹೋಗಿ. ಲಿಂಗಪ್ಪನವರೆ ನೀವು ಮಾತನಾಡುತ್ತೀರಾ?

ಶ್ರೀ ಸಿ.ಎಂ. ಲಿಂಗಪ್ಪ : ನಾನು ಸಿದ್ದವಾಗಿದ್ದೇನೆ. ಆದರೆ ಅವರು ಭಾಷಣವನ್ನು ಮುಗಿಸಿದ ಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ಅವರು ಮುಗಿಸುವ ಪ್ರಶ್ನೇಯೇನಿಲ್ಲ. ನೀವು ಮಾತನಾಡಿ.

ಶ್ರೀ ಸಿ.ಎಂ. ಲಿಂಗಪ್ಪ : ತಾವು ಹೇಳಿದ ಹಾಗೆ ನಾಳೆ ಬೆಳಿಗ್ಗೆ ಸ್ವಲ್ಪ ಬೇಗ ಸದನ ಸೇರಿದರೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಎಂತ ಮಲ್ಲಿಕಾರ್ಜುನ ಖರ್ಗೆ : ನಾವು ದಿನ ಬೆಳಿಗ್ಗೆ 10 ಗಂಟೆಗೆ ಬಂದು ಕುಳಿತರೆ ಸಾಯಂಕಾಲ 6-30ರ ತನಕ ಏಳುವ ಹಾಗಿಲ್ಲ. ಆದರೆ ನೀವು ಮಂತ್ರಿಗಳು, ಅಲ್ಲೂ ಹೋಗುತ್ತೀರಿ, ಇಲ್ಲೂ ಬರುತ್ತೀರಿ, ನಾವು ಹಾಗೆ ಮಾಡುವುದಕ್ಕಾಗುವುದಿಲ್ಲ. ಒಂದೇ ಕಡೆ ಕುಳಿತಿರಬೇಕು.

ಅಧ್ಯಕ್ಷರು : ನಮ್ಮ ಹತೋಟಿ ಮೀರಿದಂಥ ಕಾರಣಗಳಿಗಾಗಿ ಮೊದಲ ಎರಡು ದಿವಸಗಳ ಕಾಲ ಏನೂ ಕಲಾಪ ನಡೆಸುವುದಕ್ಕಾಗಲಿಲ್ಲ. ಪ್ರತಿ ದಿವಸ ಪ್ರಮುಖವಾದ ವಿಚಾರಗಳು ಬರುತ್ತಿವೆಯಾದ ಕಾರಣ ಕೇವಲ 25 ನಿಮಿಷದಿಂದ ಒಂದು ಗಂಟೆ ಕಾಲ ಮಾತ್ರ ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಿದೆ. ನಾಳೆ ವೀರಪ್ಪನ ಚರ್ಚೆ ಬರುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನನ್ನದೊಂದು ಸಲಹೆ. ನಾಳೆ ಮುಂಜಾನೆ ಸಗೀರ್ ಅಹಮದ್‌ರವರು ಮತ್ತು ಲಿಂಗಪ್ಪನವರು ಮಾತನಾಡಲಿ. ಉತ್ತರ ಆಮೇಲೆ ಕೊಡಲಿ. ಮಧ್ಯಾಹ್ನದ ಮೇಲೆ ಪ್ರಶ್ನೋತ್ತರ ತೆಗೆದಕೊಳ್ಳಲಿ. ಏಕೆಂದರೆ ನಿಮ್ಮ ಡಿಮ್ಯಾಂಡ್ ಮೇಲೆ ಚರ್ಚೆ ಮುಂಜಾನೆ ಮುಗಿಯಲಿ. ಮಧ್ಯಾಹ್ನದ ಮೇಲೆ ಪ್ರಶ್ನೋತ್ತರ ತೆಗೆದುಕೊಳ್ಳೋಣ. ಈ ಹಿಂದೆ ಹೀಗೆ ಅನೇಕ ಸಾರಿ ಮಾಡಿದ್ದೇವೆ.

ಅಧ್ಯಕ್ಷರು : ಹೇಗೆ ಮತ್ತು ಎಷ್ಟು ಹೊತ್ತಿಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೆಳಿಗ್ಗೆ 9 ಗಂಟೆಯಿಂದ 12 ಗಂಟೆಯವರೆಗೆ ಚರ್ಚೆಯಾಗಲಿ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಸದನ ಬೆಳಿಗ್ಗೆ 9 ಗಂಟೆಗೆ ಸೇರಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಹಿಂದೆ 9 ಗಂಟೆಗೆ ಸದನ ಸೇರುತ್ತಿರಲಿಲ್ಲವೆ?

ಅಧ್ಯಕ್ಷರು : ಟೈಮಿಂಗ್ಸ್ ಅಡ್ಜಸ್ಟ್ ಆಗುವುದಿಲ್ಲ. ಏಕೆಂದರೆ ಇವರು ಬಹಳ ಹೊತ್ತು ಕುಳಿತುಕೊಳ್ಳುತ್ತೇವೆಂದರೆ ಅವರು ಎದ್ದುಹೋಗುತ್ತೇವೆಂದು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಹಿಂದೆ ವಾಟಾಳ್‌ನಾಗರಾಜ್‌ರವರ ಕಾಲದಲ್ಲಿ ಶುಕ್ರವಾರದ ದಿವಸ ಬೆಳಿಗ್ಗೆ 9 ಗಂಟೆಗೆ ಹೌಸ್ ಸೇರುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಕಾಲ ಯಾವುದು? ಈ ಹಿಂದೆ ನಾನು ಮುಖ್ಯಮಂತ್ರಿಯಾಗಿದ್ದೆನೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಅಧ್ಯಕ್ಷರೇ ನಾನು ಇಂದು ಮಾತನಾಡುವುದಿಲ್ಲ. ಈಗಾಗಲೇ ಕಾರಣ ಹೇಳಿದ್ದೇನೆ.

ಅಧ್ಯಕ್ಷರು : ಈ ರೀತಿಯಾದರೆ ಏನಾಗುತ್ತದೆಂದರೆ hardly we have any time. ಪ್ರತಿ ಸಲ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತು ಡಿಮ್ಯಾಂಡ್ಸ್ ಮೇಲೆ ಚರ್ಚೆಯಾಗಬೇಕು, ಸಬ್ಜೆಕ್ಟ್ ಕಮಿಟಿ ಬಂದಮೇಲೆ ಬೇಡಿಕೆ ಮೇಲೆ ಚರ್ಚೆಯಾಗುತ್ತಿಲ್ಲವೆಂದೂ ಕೂಡ ತಾವು ಎಕ್ಸ್‌ಪ್ರೆಸ್ ಮಾಡುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಈ ಬಾರಿ ಟೈಮ್‌ನ್ನು ಯಾರೂ ವೇಸ್ಟ್ ಮಾಡಿಲ್ಲ. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಇಬ್ಬರು ಮಾತನಾಡಿದ್ದೇವೆ. ಬೇರೆಯವರು ಯಾರೂ ಕೂಡ ಅನಾವಶ್ಯಕವಾಗಿ ಮಾತನಾಡಿಲ್ಲ. ಈ ಟೊಮೇಟೋ ವಿಷಯವೇ ಸುಮಾರು ಎರಡೂವರೆ ಗಂಟೆಗಳ ಕಾಲ ಚರ್ಚೆಯಾಗಿದೆ. ಅದರಲ್ಲಿ ಎಲ್ಲರೂ ಭಾಗಿಗಳು. ಆ ಕಡೆ ಸದಸ್ಯರು ಮತ್ತು ಈ ಕಡೆ ಸದಸ್ಯರೆಲ್ಲರೂ ಭಾಗಿಗಳು.

ಅಧ್ಯಕ್ಷರು : ಕಾವೇರಿ ಬಗ್ಗೆ ಚರ್ಚೆ $11^{1}/_{4}$ ಗಂಟೆಗೆ ಪ್ರಾರಂಭವಾಗಿ $3\ ^{3}/_{4}$ ಗಂಟೆಗೆ ಮುಕ್ತಾಯವಾಯಿತು. ನಾಳೆಗೆ ವೀರಪ್ಪನ್ ಚರ್ಚೆ ಎಷ್ಟು ಕಾಲ ತೆಗೆದುಕೊಳ್ಳುತ್ತದೋ ಏನೋ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವೀರಪ್ಪನ್ ಚರ್ಚೆ ಮಧ್ಯಾಹ್ನದ ಮೇಲೆ ಬರುತ್ತದಲ್ಲವೆ?

ಅಧ್ಯಕ್ಷರು : ಇದರ ಮೇಲೂ ಎಷ್ಟು ಗಂಟೆಗಳ ಕಾಲ ಚರ್ಚೆಯಾಗುತ್ತದೋ ಏನೋ.

ಶ್ರೀ ಸಿ. ಬೈರೇಗೌಡ : ಮಂಗಳವಾರ ತೆಗೆದುಕೊಳ್ಳುತ್ತೇವೆಂದು ಹೇಳಲಾಗಿತ್ತೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ಪಿಕರ್‌ರವರು ಹೇಳಿದ್ದನ್ನು ನಾನು ಹೇಳುತ್ತಿದ್ದೇನೆ. ಹೌಸ್‌ನಲ್ಲಿ ಕಮಿಟ್‌ಮೆಂಟ್ ಆಗಿದ್ದನ್ನು ಹೇಳುತ್ತಿದ್ದೇನೆ. ಯಾವುದೇ ಸಂದರ್ಭದಲ್ಲಿ ಮಂಗಳವಾರವೇ ಇದನ್ನು ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ಉತ್ತರ ಕೊಡಲು ನೀವು ತಯಾರಿರಬೇಕೆಂದು ಈ ಹಿಂದೆಯೇ ನಿಮಗೆ ವಾರ್ನಿಂಗ್ ಕೊಟ್ಟಿದ್ದಾರೆ.

MR. SPEAKER : We are adjourning today and meeting at 10.A.M. tomorrow. ಈಗ ಸದನವನ್ನು ಮುಂದೂಡಲಾಗಿದೆ, ಪುನಃ ನಾಳೆ ಬೆಳಿಗ್ಗೆ 10 ಗಂಟೆಗೆ ಸದನ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6 ಗಂಟೆ 45 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 5ನೇ ಆಗಸ್ಟ್ 1997ರ ಮಂಗಳವಾರದಂದು ಬೆಳಿಗ್ಗೆ 10ಗಂಟೆಗೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)